ಶ್ರೀ ಜಗದೀಶ್ ಶೆಟ್ಟರ್:- ಹಾಗಾದರೆ ಇದನ್ನು ಗುರುವಾರದಂದು ಚರ್ಚೆಗೆ ತೆಗೆದುಕೊಳ್ಳಿ. ಈ ವಿಷಯ ಬಹಳ ಮುಖ್ಯವಾದುದು. ಆದಕಾರಣ ....

ಅಧ್ಯಕ್ಷರು:- ಗುರುವಾರ ಮಾಡೋಣ. ಧರಣಿ ನಿರತ ಸದಸ್ಯರು ಮರಳಿ ತಮ್ಮ ಸ್ಥಾನಗಳಿಗೆ ವಾಪಸ್ಸಾದರು)

ಔರಾದ ತಾಲ್ಲೂಕಿನ ಸಿಂತಾಪೂರ ಗ್ರಾಮದಲ್ಲಿ ವಿದ್ಯುತ್ ಸ್ಥಾವರ ಪ್ರಾರಂಭ

173 (1971) ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನ ಸಂತಾಪೂರ ಗ್ರಾಮದಲ್ಲಿ 110 ಕೆ.ವಿ. ಹಾಗೂ ಬಂಡಾ ಗ್ರಾಮದಲ್ಲಿ 33 ಕೆ.ವಿ. ವಿದ್ಯುತ್ ಸ್ಥಾವರಗಳ ಸ್ಥಾಪನೆ ಬಗ್ಗೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿದ್ಯುತ್ ಸ್ಥಾವರಗಳ ಕೊರತೆಯಿಂದ ಇಡೀ ತಾಲ್ಲೂಕಿನಲ್ಲಿ ವಿದ್ಯುತ್‌ಸರಬರಾಜು ಅಸ್ತವ್ಯಸ್ತವಾಗುತ್ತಿರುವುದು ಸರ್ಕಾರಕ್ಕೆ ತಿಳಿಸಿದೆಯೇ;

ಇ) ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು, ಔರಾದ್ ತಾಲ್ಲೂಕಿನ ಸಂತಾಪೂರದಲ್ಲಿ 110 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದೇ ತಾಲ್ಲೂಕಿನ ಚೆಂದಾ ಗ್ರಾಮಂದಲ್ಲಿ 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ. ಆದರೆ ಖೇರ್ಡಾ - ಬಿ. ಗ್ರಾಮದಲ್ಲಿ ಒಂದು 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿನ ಸ್ಥಾಪನೆ ಬಗ್ಗೆ ಪ್ರಸ್ತಾವನೆ ಇರುತ್ತದೆ.

ಆ) ಪ್ರಸ್ತುತ ಔರಾದ್ ತಾಲ್ಲೂಕಿನಲ್ಲಿ ಔರಾದ್ ಕಮಲಾನಗರ ಮತ್ತು ಸಂತಾಪೂರಗಳಲ್ಲಿ 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಔರಾದ್ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಸಂತಾಪೂರದಲ್ಲಿ 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ನ್ನು ಸ್ಥಾಪಿಸುವ ವಿಷಯದ ಬಗ್ಗೆ ಕಾರ್ಯಪ್ರವೃತ್ತವಾಗಿರುತ್ತದೆ.

ಇ) ಔರಾದ್ ತಾಲ್ಲೂಕಿನಲ್ಲಿ ವಿದ್ಯುತ್ ಸಮಸ್ಯೆಗಳು ಈ ತಾಲ್ಲೂಕಿನಲ್ಲಿ ವಿದ್ಯುತ್ ಬೇಡಿಕೆ ಮುಂತಾದ ಅಂಶಗಳನ್ನು ಗಮನಿಸಿ, ಈ ತಾಲ್ಲೂಕಿನ ಸಂತಾಪೂರದಲ್ಲಿ ಒಂದು 1 10 ಎಂ.ವಿ.ಎ. 110:11 ಕೆ.ವಿ. ಮತ್ತು 1.20 ಎಂ.ವಿ.ಎ. 110:33 ಕೆ.ವಿ. ವಿದ್ಯುತ್ ವಿತರಣ ಕೇಂದ್ರದ ಸ್ಥಾಪನೆಗೆ ಅಕ್ಟೋಬರ್ 2002ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ. ಈ ವಿದ್ಯುತ್ ವಿತರಣ ಕೇಂದ್ರದ ಸ್ಥಾಪನೆಗೆ ಅವಶ್ಯವಿರುವ ಭೂಮಿಯನ್ನು ಗುರುತಿಸಲಾಗಿದ್ದು ಭೂ ಸ್ವಾಧೀನದ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಈ ಕಾಮಗಾರಿಯನ್ನು 'ಟರ್ನ್ ಕೀ' ಆಧಾರದಲ್ಲಿ ನಿರ್ವಹಿಸಲು ಗುತ್ತಿಗೆದಾರರನ್ನು ಆದಷ್ಟು ಜಾಗ್ರತೆ ಗೊತ್ತುಪಡಿಸಲಾಗುವುದು. ಈ ಕಾಮಗಾರಿಯ ನಿರ್ವಹಣೆಗೆ ಬೇಕಾಗುವ ಹಣಕಾಸಿನ ವ್ಯವಸ್ಥೆ ಆಗಬೇಕಾಗಿರುತ್ತದೆ. ಹಣಕಾಸಿನ ವ್ಯವಸ್ಥೆ ಆದ ಕೂಡಲೇ ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತದೆ.

ಶ್ರೀ ಗುಂಡಪ್ಪ ವಕೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಇಂಧನ ರಾಜ್ಯ ಸಚಿವರು ಪ್ರಾಮಾಣಿಕವಾಗಿ ಉತ್ತರವನ್ನು ಕೊಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಔರಾದ್ ತಾಲ್ಲೂಕಿನಲ್ಲಿ ವಿದ್ಯುತ್ತಿನ ಸರಬರಾಜಿನಲ್ಲಿ ತೀವ್ರತರವಾದ ಅಭಾವ ಇದೆ ಎಂದು ಒಪ್ಪಿಕೊಂಡಿದ್ದಾರೆ. ಇದನ್ನು ಸರ್ಕಾರ ಗಮನಿಸಿ 110 ಕೆವಿ ವಿತರಣಾ ಕೇಂದ್ರವನ್ನು ಸ್ಥಾಪನೆ ಮಾಡಲು ಯೋಚನೆ ಮಾಡಿದೆ. ಅದಕ್ಕಾಗಿ ಆಡಳಿತಾತ್ಮಕ ಮಂಜೂರಾತಿ ಕೂಡ ಪಡೆದಿದ್ದೇವೆ, ಜಮೀನು ಗುರುತಿಸಿದ್ದೇವೆ ಎಂದು ಇದನ್ನೆಲ್ಲಾ ಹೇಳಿದ್ದಾರೆ. ಆದರೆ ತಮ್ಮ ಉತ್ತರದಲ್ಲಿ ಹಣದ ವ್ಯವಸ್ಥೆ ಆದ ತಕ್ಷಣ ಕಾಮಗಾರಿ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಈ ಹಣದ ವ್ಯವಸ್ಥೆ ಯಾವಾಗ ಆಗುತ್ತದೆ? ಯಾವಾಗ ಕಾಮಗಾರಿ ಕೈಗೊಳ್ಳುತ್ತಾರೆ? ಆ ಪ್ರಶ್ನೆಗೆ ದಯಮಾಡಿ ಉತ್ತರ ಕೊಡಬೇಕು.

ಶ್ರೀ ಬಸವರಾಜ್ ಹೆಚ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಹಣದ ವ್ಯವಸ್ಥೆ ಯಾವಾಗ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ, ಆದಷ್ಟು ಬೇಗ ಎರಡೂ -ಮೂರು ತಿಂಗಳುಗಳಲ್ಲಿ ಇಲ್ಲವಾದರೆ ಇದೇ ವರ್ಷದಲ್ಲಿ ನಾವು ಹಣದ ವ್ಯವಸ್ಥೆ ಮಾಡುತ್ತೇವೆ. ಈಗಾಗಲೇ ಟರ್ನ್‌ಕೀ ಬೇಸಿಸ್ ಮೇಲೆ ಟೆಂಡರ್ ಕಾಲ್‌ಫಾರ್ ಮಾಡುವುದಕ್ಕೆ ನಿರ್ಧಾರ ಮಾಡಿದ್ದೇವೆ. 2-3 ಮೂರು ತಿಂಗಳುಗಳಲ್ಲಿ 110 ಕೆವಿ ಸಂತಪೂರ್‌ನಲ್ಲಿ ಏನು ಮಾಡಬೇಕು ಅದು ಪ್ರಾರಂಭ ಮಾಡುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು:- ಚೌಡರೆಡ್ಡಿಯವರೇ, ತಮ್ಮ ಪ್ರಶ್ನೆಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೆ, ನಗರಾಭಿವೃದ್ಧಿ ಇಲಾಖೆಯಿಂದ ಗ್ರಾಮೀಣಾಭಿವೃದ್ಧಿ ಇಲಾಖೆಗೆ ವರ್ಗಾಯಿಸಲಾಗಿದೆ ಎಂದು ಹೇಳಿದ್ದಾರೆ. ಪ್ರಶ್ನೆ ಏನಿದೆ ನೋಡಿ. ಚಿಂತಾಮಣಿ ನಗರಕ್ಕೆ ನೀರು ಸರಬರಾಜು ವಿಷಯ. ಚಿಂತಾಮಣಿ ನಗರವನ್ನು ಗ್ರಾಮೀಣ ಅಭಿವೃದ್ಧಿಗೆ ವರ್ಗಾಯಿಸಿದ್ದಾರೆಯೇ ಈ ರೀತಿಯಾದರೆ ನಾವು ಪ್ರಶ್ನೆ ಏತಕ್ಕೆ ಹಾಕಬೇಕು? ಚಿಂತಾಮಣಿ ನಗರ ನೀರು ಸರಬರಾಜು ಗ್ರಾಮೀಣಾಭಿವೃದ್ಧಿಗೆ ಹೇಗೆ ಸೇರುತ್ತದೆ? ಈ ತರಹ ಮಾಡಿದರೆ ಹೇಗೆ? ಟ್ರಾನ್ಸ್‌ಫರ್ ಆಗಿದೆ ಅಂದರೆ ಹೇಗೆ?

ಅಧ್ಯಕ್ಷರು:- ಚಿಂತಾಮಣಿ ಹಳ್ಳಿ ಎಂದು ಮಾಡಿದ್ದೀರಿ. ಇದು ಯಾರು ಮಾಡಿದ್ದು? ಇಲಾಖೆಯವರು ಮಾಡಿದ್ದು ನಾವು ಮಾಡಿಲ್ಲ. ನಾವು ಕಳುಹಿಸಿರುವುದು ಅರ್ಬನ್ ಇಲಾಖೆಗೆ ಕಳುಹಿಸಿದ್ದೇವೆ.

ಶ್ರೀ ಚೌಡರೆಡ್ಡಿ:- ಯಾರಾದರೂ ಮಾಡಲಿ, ಈ ತರಹ ಆದರೆ ನಾವು ಏನು ಮಾಡುವುದು? ಅಧಿಕಾರಿಗಳಿಗೆ ಓದುವುದಕ್ಕೆ ಆಗದೆ ಇದ್ದರೆ, ಕಣ್ಣು ಕಾಣದೆ ಇದ್ದರೆ ನನ್ನ ಕನ್ನಡಕ ಕೊಡುತ್ತೇನೆ ತೆಗೆದುಕೊಳ್ಳಲಿ. ಓದಿದ್ದು ಅರ್ಥವಾಗದೆ ಇದ್ದರೆ ನಾವು ಪ್ರಶ್ನೆ ಏಕೆ ಹಾಕುವುದು, ಏನು ಮಾಡುವುದು ಹೇಳಿ. ಸರಿಯಾಗಿ ಕಣ್ಣು ತೆರೆದು ನೋಡಲಿ, ಇಲ್ಲದಿದ್ದರೆ ನನ್ನ ಕನ್ನಡಕ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು :- ಇದರ ಬಗ್ಗೆ ಉತ್ತರ ಕೊಡುವವರು ಯಾರೂ ಇಲ್ಲ. ಉತ್ತರ ತರಿಸೋಣ.